**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ - 766/2022**
**ಚಾಸಾ - 05 / ಪ್ರಾಸಾ - 09**

| | |
|---|---|
| ಹೆಸರು | **ವಸಂತ್ ಕುಮಾರ್** |
| ತಂದೆಯ ಹೆಸರು | **ಮುದ್ದಪ್ಪ** |
| ವಯಸ್ಸು | **40** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಗೌಡಹಳ್ಳಿ** |

**ದಿನಾಂಕ: 05-02-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಈಗ ಸಾಕ್ಷಿಗೆ ನಿಪಿ-3ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. 2023ನೇ ಇಸವಿಯಲ್ಲಿ ಗಲಾಟೆಯ ವಿಷ ಯಕ್ಕೆ ಸಂಬಂಧಿಸಿದಂತೆ ಕೃತ್ಯ ನಡೆದ ಸ್ಥಳದಲ್ಲಿ ನಾನು ನಿಪಿ-2 ಮತ್ತು 3ಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ನನ್ನ ಜೊತೆ ನಿಪಿ-2 ಮತ್ತು 3ಕ್ಕೆ ಚಾಸಾ-1 ಮತ್ತು 4ರವರು ಸಹಿಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಎರಡು ಕಾಡು ಜಾತಿಯ ದೊಣ್ಣೆಗಳನ್ನು ವಶಪಡಿಸಿಕೊಂಡರು. ಈಗ ಸಾಕ್ಷಿಗೆ ಮುದ್ದೆ ಮಾಲು 1 ಮತ್ತು 2ಅನ್ನು ತೋರಿಸಿದ್ದು, ಅದನ್ನು ನಿಪಿ-2ರಂತೆ ಪಂಚನಾಮೆ ಮಾಡುವ ಸಮಯದಲ್ಲಿ ವಶಪಡಿಸಿಕೊಳ್ಳಲಾಗಿದೆ. ಚಾಸಾ-2ರವರಿಂದ ನಾನು ಸದರಿ ಗಲಾಟೆಯ ಬಗ್ಗೆ ನಾನು ತಿಳಿದುಕೊಂಡೆನು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ,**

**ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು. ನಾನು ಮತ್ತು ಅವರು ಪುರಸ್ಕರಿಸಿ ವಾಟೀ ಸವಾಲು ಮಾಡಲು ಅ ನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿಃ07.12.2022ರಂದು ಮಧ್ಯಾಹ್ನ ಸುಮಾರು 1.20 ಗಂಟೆಯ ಸಮಯದಲ್ಲಿ ನೀವು ಕರಕಲ್ಲುಪಾಳ್ಯ ಗ್ರಾಮಕ್ಕೆ ನಿಮ್ಮ ಸ್ವಂತ ಕೆಲಸಕ್ಕೆ ಬಂದಿದ್ದಾಗ ನಿಮಗೆ ಪರಿಚಯ ಇರುವ ಚಾಸಾ-1ರವರ ಮಗನಾದ ನಾಗೇಶ್ ರವರು ಬೇಗ ಕಾರ್ ತೆಗೆದುಕೊಂಡು ಬಾ ತಮ್ಮ ತಂದೆಯಾದ ಚಾಸಾ-2ರವರ ಜಮೀನಿನ ಬಳಿ ಆರೋಪಿಗಳು ಗಲಾಟೆ ಮಾಡಿ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿರುತ್ತಾರೆ, ತಕ್ಷಣ ನೀವು ಕಾರನ್ನು ತೆಗೆದುಕೊಂಡು ನೀವು ಮತ್ತು ನಾಗೇಶ್ ಇಬ್ಬರು ಕಾರಿನಲ್ಲಿ ಸ್ದಳಕ್ಕೆ ಹೋಗಿದ್ದನ್ನು ನೋಡಿ ಆರೋಪಿಗಳು ಸ್ದಳದಿಂದ ಹೋಗುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಸ್ಥಳಕ್ಕೆ ಹೋಗಿ ನೋಡಿದಾಗ ಚಾಸಾ-1ರವರ ಬಲಗಾಲು, ಬಲಗೈ ಬೆರಳು ಮತ್ತು ಇತರೆ ಕಡೆ ಏಟಾಗಿತ್ತು, ಗಲಾಟೆಯ ಬಗ್ಗೆ ಚಾಸಾ-1ರವರನ್ನು ಕೇಳಿದಾಗ ದಿಃ 07.12.2022ರಂದು ಮಧ್ಯಾಹ್ನ ಸುಮಾರು 1.00 ಗಂಟೆಯಲ್ಲಿ ಅವರು ಮನೆಯಲ್ಲಿ ಇದ್ದಾಗ ಚಾಸಾ-2ರವರು ಫೋನ್ ಮಾಡಿ ಚಾಸಾ-2ರವರಿಗೆ ಸೇರಿದ ಸರ್ವೆ ನಂ.151/1ರಲ್ಲಿ ಟಮೋಟ ಸಸಿಗಳನ್ನು ಹಾಕುತ್ತಿದ್ದಾಗ ಆರೋಪಿಗಳು ಸದರಿ ಸರ್ವೆ ನಂಬರ್ ನ ಜಮೀನು ತಮ್ಮದು ಎಂದು ಗಲಾಟೆ ಮಾಡಿದರು ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

2. ತನಗೆ ಜಮೀನಿನ ಬಗ್ಗೆ ಸ್ವಲ್ಪ ತಿಳುವಳಿಕೆ ಇರುವುದರಿಂದ ಇಲ್ಲಿಗೆ ಬಂದು ಇವರಿಗೆ ಸ್ವಲ್ಪ ಹೇಳು ಎಂದು ಕರೆದ್ದಿದ್ದರಿಂದ ಚಾಸಾ-2ರವರ ಜಮೀನಿನ ಬಳಿ ಬಂದಾಗ ಸದರಿ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ತರಲು ಚಾಸಾ-2ರವರು ಮನೆಗೆ ಹೋದರು, ಅಷ್ಟರಲ್ಲಿ ಮಧ್ಯಾಹ್ನ ಸುಮಾರು 1.20 ಗಂಟೆಯಲ್ಲಿ ಆರೋಪಿಗಳು ಚಾಸಾ- 1 ರವರ ಬಳಿ ತನ್ನ ತಾತನ ಕಾಲದಿಂದಲೂ ಆ ಜಮೀನು ಅವರದು, ಅವರ ಬಳಿ ಕಾಗದ ಪತ್ರ ಇದೆಯೇ ಎಂದು ಕೇಳಿದಾಗ ಇಬ್ಬರು ಚಾಸಾ-1ರವರನ್ನು ಗುರಾಯಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1ನೇ ಆರೋಪಿಯು ಏಕಾ ಏಕಿ ಚಾಸಾ-1ರವರ ಮೇಲೆ ಕೋಪಗೊಂಡು ಹಳೆಯ ದ್ವೇಷದಿಂದ ಅವಾಚ್ಯ ಶಬ್ದಗಳಿಂದ ಬೈದರು, ನಿನ್ನನ್ನು ಸುಮ್ಮನೇ ಬಿಡುವುದಿಲ್ಲ ಪ್ರಾಣ ತೆಗೆದು ಸಾಯಿಸಿ ಬಿಡುತ್ತೇವೆ ಎಂದು ಅಲ್ಲಿಯೇ ಬಿದ್ದಿದ್ದ ದೊಣ್ಣೆಯಿಂದ ಚಾಸಾ-1ರವರ ಬಲಗಾಲಿಗೆ ಹೊಡೆದು, ಕೈಯಿಂದ ಮುಖಕ್ಕೆ ಗುದ್ದಿ,

ಕಾಲಿನಿಂದ ಒದ್ದು, ಕೆಳಗೆ ಬೀಳಿಸಿ ಮನಬಂದಂತೆ ಹೊಡೆದರು ಮತ್ತು 2ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣ ಸಹಿತ ಬಿಡುವುದು ಬೇಡ ಎಂದು ಅಲ್ಲಿಯೇ ಬಿದ್ದಿದ್ದ ದೊಣ್ಣೆಯಿಂದ ಚಾಸಾ-1ರವರ ಬಲಗೈ ಬೆರಳಿಗೆ ಹೊಡೆದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಷ್ಟರಲ್ಲಿ ಅಲ್ಲಿಯೇ ಇದ್ದ ಚಾಸಾ-3 ಮತ್ತು 4ರವರು ಜಗಳ ಬಿಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

3. ನಂತರ ಗಾಯಗೊಂಡ ಚಾಸಾ-1ರವರನ್ನು ಚಾಸಾ-6 ಮತ್ತು 7 ರವರನ್ನು ನಿಮ್ಮ ಕಾರಿನಲ್ಲಿ ಚಂದ್ರಪ್ಪ ಸರ್ಕಲ್ ನಲ್ಲಿ ಇರುವ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಚಾಸಾ-1ರವರು ನಿಪಿ-1ರಂತೆ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿಃ08.12.2022ರಂದು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲೀಸರು ನಿಮಗೆ, ನಿಪಿ-3ರಂತೆ ನೋಟಿಸ್ ನ್ನು ನೀಡಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅದೇ ದಿನದಂದು ಬೆಳಗ್ಗೆ 10.00 ರಿಂದ 11.00 ಗಂಟೆ ಸಮಯದಲ್ಲಿ ಚಾಸಾ-1ರವರು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-1 ಮತ್ತು ಚಾಸಾ-7ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿಃ08.12.2022ರಂದು ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ. ಎಂ.ಎಂ, ವಕೀಲರಿಂದಃ-**

ಚಾಸಾ-1ರಿಂದ 4 ಮತ್ತು 6ರವರು ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಚಾಸಾ-2ರವರ ಅಣ್ಣನಾದ ನಾಗೇಂದ್ರಪ್ಪ ರವರ ಅಳಿಯ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಗ್ರಾಮದಿಂದ ಕೃತ್ಯ ನಡೆಯಿತು ಎಂದು ಹೇಳುವ ಸ್ಥಳಕ್ಕೆ 20 ರಿಂದ 25 ಕಿ. ಮೀ ನಷ್ಟು ಅಂತರ ಇದೆ ಎಂದರೆ ಸಾಕ್ಷಿಯು 20 ಕಿ.ಮೀ ಅಂತರ ಇದೆ ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಇದಕ್ಕೂ ಮೊದಲು ಎಲ್ಲೂ ಸಹ ನನ್ನ ಹೇಳಿಕೆಯನ್ನು ನೀಡಿರುವುದಿಲ್ಲ. ದಿಃ07.12.2022 ಕ್ಕಿಂತ ಮೊದಲು ಆರೋಪಿಗಳು ಮತ್ತು ಚಾಸಾ1ರವರ ಕುಟುಂಬದ ನಡುವೆ ಜಮೀನಿನ ವಿಷಯಕ್ಕೆ ಮನಸ್ಥಾಪ ಇದೆ ಮತ್ತು ಅವರ ನಡುವೆ ಸಿವಿಲ್ ದಾವೆಯು ಚಾಲ್ತಿಯಲ್ಲಿ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

2. ನಾನು ಆ ದಿನದಂದು ದೇವಸ್ಥಾನಕ್ಕೆ ಹೋಗಿದ್ದೇನು, ಮತ್ತು ಮಧ್ಯಾಹ್ನ 1.00 ಗಂಟೆಗೆ ಕರೆಕಲ್ಲು ಪಾಳ್ಯ ಗ್ರಾಮಕ್ಕೆ ನನ್ನ ಹೆಂಡತಿಯ ತವರುಮನೆಗೆ ಬಂದಿದ್ದೇನು. ಚಾಸಾ-6ರವರು ನನಗೆ ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ಕರೆ ಮಾಡಿ ಗಲಾಟೆಯ ಬಗ್ಗೆ ತಿಳಿಸಿ ಕಾರನ್ನು ತೆಗೆದುಕೊಂಡು ಬರುವಂತೆ ಹೇಳಿದರು. ನಾವು ಕೃತ್ಯ ನಡೆದ ಸ್ಥಳಕ್ಕೆ ಹೋಗುವ ಸ್ವಲ್ಪ ದೂರದಲ್ಲಿ ಇದ್ದಾಗ ಆರೋಪಿಗಳು ಓಡಿ ಹೋದರು. ನಾನು ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ಕೇವಲ ಚಾಸಾ-1 ಮತ್ತು 2ರವರು ಇದ್ದರು. ಚಾಸಾ-1ರವರ ಮಂಡಿ ಮತ್ತು ಬೆರಳಿಗೆ ಏಟಾಗಿತ್ತು. ಚಾಸಾ-1ರವರನ್ನು ನಾನು ಚಂದ್ರಪ್ಪ ಸರ್ಕಲ್ ನಲ್ಲಿ ಇರುವ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೇನು. ಚಾಸಾ-1ರವರಿಗೆ ಕೇವಲ ಪ್ರಥಮ ಚಿಕಿತ್ಸೆಯನ್ನು ಮಾಡಿಸಲಾಗಿರುತ್ತದೆ. ಚಾಸಾ-1ರವರನ್ನು ಪುನಃ ನಾನು ಅವರ ಮನೆಗೆ ಬಿಟ್ಟಿರುತ್ತೇನೆ. ಮತ್ತು ಅದೇ ದಿನದಂದು ನಾನು ನನ್ನ ಮನೆಗೆ ಹೋಗಿರುತ್ತೇನೆ. ಅದಾದ ನಂತರ ನಾನು 3 ದಿನಗಳ ಕಾಲ ಕರೆಕಲ್ಲುಪಾಳ್ಯ ಗ್ರಾಮಕ್ಕೆ ಬೆಂದಿರುವುದಿಲ್ಲ.

3. ನಿಪಿ-2 ಮತ್ತು 3ಕ್ಕೆ ನೀವು ನಿಮ್ಮ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಗೆ ಬರುವಂತೆ ಪೋಲೀಸರು ನನಗೆ ನೋಟೀಸನ್ನು ನೀಡಿದರು. ನಿಪಿ-3ನ್ನು ಯಾವ ದಿನಾಂಕ, ಸಮಯ ಮತ್ತು ಯಾವ ಅಧಿಕಾರಿ ನನಗೆ ನೀಡಿದರು ಎಂದು ನನಗೆ ಗೊತ್ತಿಲ್ಲ. ಪಂಚಾನಮೆಯನ್ನು ಮಾಡಲು ಬಂದಿದ್ದ ಅಧಿಕಾರಿಯ ಹೆಸರು ಎಂದು ನನಗೆ ಗೊತ್ತಿಲ್ಲ. ನಿಪಿ-2ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಯಾವ ದಿನಾಂಕ ಮತ್ತು ಸಮಯದಲ್ಲಿ ನಿಪಿ-2ರಂತೆ ಪಂಚನಾಮೆಯನ್ನು ಮಾಡಿದರು ಎಂದು ನನಗೆ ನೆನಪಿಲ್ಲ. ಪಂಚನಾಮೆಯನ್ನು ಮಾಡಿದ ಸ್ಥಳಕ್ಕೆ ಚಕ್ಕುಬಂದಿ ನನಗೆ ಗೊತ್ತಿಲ್ಲ. ಮುದ್ದೆಮಾಲು 1 ಮತ್ತು 2ನ್ನು ನೀವು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಮುದ್ದೆಮಾಲು 1 ಮತ್ತು 2 ಸಾಮಾನ್ಯವಾಗಿ ಹಳ್ಳಿಗಳಲ್ಲಿ ಸಿಗುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ, ನಿಮ್ಮ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಾಡಿಲ್ಲ ಮತ್ತು ಮುದ್ದೇಮಾಲು 1 ಮತ್ತು 2 ಅನ್ನು ವಶಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1 ರಿಂದ 4 ಮತ್ತು 6 ರವರು ನಿಮ್ಮ ಸಂಬಂಧಿಕರು ಆಗಿರುವ ಕಾರಣದಿಂದ

ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ . ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**